ವಾಸ್ತವದಲ್ಲಿ ಅವರ ವಿನೂತನ ಪ್ರತಿಭಟನೆ ಪರಿಸರ ಹೋರಾಟವೇನೂ ಆಗಿರದೆ, ಸ್ಥಳೀಯ ಸಂಪನ್ಮೂಲದ ಮೇಲೆ ತಮ್ಮದೇ ಸ್ವಾಮ್ಯ ಇರಬೇಕು ಎಂಬುದನ್ನು ಪ್ರತಿಪಾದಿಸುವುದಾಗಿತ್ತು. ನಂತರ ಪ್ರಚುರಗೊಂಡ ಬಹುತೇಕ ಪರಿಸರ ಹೋರಾಟಗಳು ಇರುವ–ಇಲ್ಲದವರ ನಡುವಿನ ಸಾಮಾಜಿಕ ಹೋರಾಟಗಳಾಗಿದ್ದವೇ ಹೊರತು ಪರಿಸರ ಉಳಿಸುವುದಕ್ಕಾಗಿಯೇ ನಡೆದ ನಿರ್ದಿಷ್ಟ ಹೋರಾಟಗಳಾಗಿರಲಿಲ್ಲ. ಏಕೆಂದರೆ, ಪ್ರತಿ ಅಭಿವೃದ್ಧಿ ಯೋಜನೆಯ ಹಿಂದೆ ಆದಿವಾಸಿಗಳ, ಅನಕ್ಷರಸ್ಥರ, ರೈತರ, ಮೀನುಗಾರರ ಬದುಕು ಪಲ್ಲಟಗೊಂಡು ಒತ್ತಾಯದ ಕಳೆದುಕೊಳ್ಳುವಿಕೆ ಇರುತ್ತಿತ್ತು ಮತ್ತು ದೂರದ ಪಟ್ಟಣದ ಸುಶಿಕ್ಷಿತ ಜನರಿಗೆ ಅನುಕೂಲವಾಗುತ್ತಿತ್ತು. ಬೃಹತ್ ಕಾರ್ಖಾನೆ, ಅಣೆಕಟ್ಟು, ರಸ್ತೆ, ಸುರಂಗ ಮಾರ್ಗ, ಅಭಯಾರಣ್ಯ ಇವುಗಳಲ್ಲೆಲ್ಲ ನೆಲೆ ಕಳೆದುಕೊಂಡವರು ಬಡತನ ರೇಖೆಗಿಂತ ಕೆಳಗಿರುವವರೇ ಆಗಿದ್ದರು. ಹಾಗಾಗಿ, ನಮ್ಮೆಲ್ಲ ಪರಿಸರ ಹೋರಾಟಗಳು ಮೊದಲು ಶುರುವಾದಾಗ ಸಾಮಾಜಿಕ ಚಳವಳಿಗಳ ಸ್ವರೂಪದಲ್ಲಿದ್ದವು. ಇಲ್ಲಿ ಪರಿಸರದ ಉಳಿವೆನ್ನುವುದು ಬದುಕಿನ ಉಳಿವಿನ ಜೊತೆ ತಳುಕು ಹಾಕಿಕೊಂಡಿತ್ತು. ಬಡಜನತೆಗೆ ಪರಿಸರವನ್ನು ಅವಲಂಬಿಸಿಯೇ ಬದುಕುವ ಅನಿವಾರ್ಯತೆ ಇತ್ತು. ಪರಿಸರವನ್ನು ಅನುಭವಿಸುತ್ತಲೇ ಅದನ್ನು ಪುನರ್ ನಿರ್ಮಾಣ ಮಾಡಬೇಕಾದ ಒತ್ತಾಯವಿತ್ತು. ಇಲ್ಲಿ ಬದುಕು ಮತ್ತು ಪರಿಸರ ಒಂದೇ ನಾಣ್ಯದ ಎರಡು ಮುಖಗಳಾದವು. ಔದ್ಯೋಗಿಕತೆಯನ್ನೇ ಮೈಯಾಗಿಸಿಕೊಂಡಿದ್ದ ವಿದೇಶಗಳ ಪರಿಸರ ಹೋರಾಟ ಶುರುವಾದದ್ದು ಅದು ಬಹುತೇಕ ನಾಶವಾದ ಮೇಲೆಯೇ; ಎಲ್ಲ ಭೌತಿಕ ಅನುಕೂಲಗಳನ್ನು ಪಡೆದುಕೊಂಡಾದ ಮೇಲೆ, ಪ್ರಾಣಿ–ಪರಿಸರ–ಕಾಡು ಉಳಿಸಲು ಯೋಜನೆ ರೂಪುಗೊಂಡವು. ಆದರೆ ನಮ್ಮ ನೆಲದ ಕಥೆ ವಿಭಿನ್ನ. ವಿದೇಶದ ಪರಿಸರ ಹೋರಾಟಕ್ಕೂ ನಮ್ಮದಕ್ಕೂ ತುಂಬಾ ವ್ಯತ್ಯಾಸವಿತ್ತು.

## ಪ್ರೇರಣೆಗೆ ಕಾರಣ

ಹಲವು ಇತಿಹಾಸತಜ್ಞರ ಅಭಿಮತದಂತೆ, ಅಮೆರಿಕದ ಪರಿಸರ ಹೋರಾಟದ ಅಧ್ಯಾಯ ಪ್ರಾರಂಭವಾದದ್ದು ಲೇಖಕಿ ರಾಚೆಲ್ ಕಾರ್ಸನ್ ಬರೆದ ಪುಸ್ತಕ ‘ಸೈಲೆಂಟ್ ಸ್ಪ್ರಿಂಗ್’ನ ಪ್ರಭಾವದಿಂದ. 1962ರಲ್ಲಿ ಪ್ರಕಟಗೊಂಡ ಈ ಪುಸ್ತಕ ಮೂವತ್ತೊಂದು ವಾರಗಳ ಕಾಲ ‘ನ್ಯೂಯಾರ್ಕ್ ಟೈಂಸ್’ ಪತ್ರಿಕೆಯ ಬೆಸ್ಟ್ ಸೆಲ್ಲರ್ ಆಗಿತ್ತು. ಅಂದು ‘ಡಿಡಿಟಿ’ ಬಳಕೆಯಿಂದಾದ ನೆಲ–ಬೆಳೆ ಹಾಗೂ ವಾಯುಮಾಲಿನ್ಯದ ವಿರುದ್ಧ ದನಿ ಎತ್ತುವಂತೆ ಮಾಡಿದ ‘ಸೈಲೆಂಟ್ ಸ್ಪ್ರಿಂಗ್’, ಅಂದಿನ ಅಧ್ಯಕ್ಷ ಜಾನ್ ಕೆನಡಿಯ ಗಮನ ಸೆಳೆದು, ತಜ್ಞರ ಸಮಿತಿ ರಚಿಸುವಂತೆ ಮಾಡಿತು. ಮನುಷ್ಯನ ಅವ್ಯಾಹತ ದಾಳಿಯಿಂದ ನಲುಗುತ್ತಿರುವ ಪರಿಸರವನ್ನು ರಕ್ಷಿಸಲೇಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸಿದ ‘ಸೈಲೆಂಟ್ ಸ್ಪ್ರಿಂಗ್’ ಪುಸ್ತಕ, ಕೈಗಾರಿಕೀಕರಣದಿಂದ ಮುಂದೊಂದು ದಿನ ಮನುಷ್ಯನ ಅಸ್ತಿತ್ವಕ್ಕೇ ಕುಂದುತರುತ್ತದೆ ಮತ್ತು ಸಮಸ್ಯೆಯ ಕೇಂದ್ರಬಿಂದು ಮನುಷ್ಯನೇ ಆಗಿರುವುದರಿಂದ ತುಂಬಾ ಹುಷಾರಾಗಿ ಕೆಲಸ ಮಾಡಬೇಕಿದೆ ಎಂಬ ಅಭಿಪ್ರಾಯ ಮೂಡಿಸುವಲ್ಲಿ ಯಶಸ್ವಿಯಾಯಿತು. ಅಮೆರಿಕ ತನ್ನ ಪರಿಸರನಾಶದ ಕಾರಣ ಹುಡುಕಿ ಸರಿಪಡಿಸಲು ಅಪಾರ ಹಣ ವ್ಯಯಿಸಲು ಪ್ರಾರಂಭಿಸಿತು.

ಇತ್ತ ಭಾರತದಲ್ಲೂ ಪರಿಸ್ಥಿತಿ ಬಿಗಡಾಯಿಸುವ ಲಕ್ಷಣ ಗೋಚರಿಸಿದ್ದವು. ಹಸಿರು ಕ್ರಾಂತಿಯ ಪರಿಣಾಮದಿಂದ ಆಹಾರ ಉತ್ಪಾದನೆಯ ಸ್ವಾವಲಂಬನೆ ಲಭಿಸಿತಾದರೂ, ಅತಿಯಾದ ರಾಸಾಯನಿಕ ಗೊಬ್ಬರ ಬಳಕೆಯಿಂದ ಹೊಲ–ಗದ್ದೆಗಳು ಫಲವತ್ತತೆ ಕಳೆದುಕೊಳ್ಳತೊಡಗಿದವು. ಬೆಳೆದ ಬೆಳೆ ವಿಷವಾಯಿತು. ರಾಸಾಯನಿಕವು ಬೆಳೆಗಿಂತ ನೆಲ ಹೊಕ್ಕಿದ್ದೇ ಜಾಸ್ತಿಯಾದ್ದರಿಂದ, ಸಾರಜನಕ ಸತ್ವ ನಾಶವಾಗಿ ಇಳುವರಿ ಕುಸಿಯಿತು. ಕೆಲವೇ ವರ್ಷಗಳ ಹಿಂದೆ ಹೆಮ್ಮೆ ಮೂಡಿಸಿದ್ದ ಹಸಿರು ಕ್ರಾಂತಿ ರೈತಾಪಿ ವರ್ಗದ ನಿದ್ದೆಗೆಡಿಸಿ ಖಳನಾಯಕನ ಜಾಗದಲ್ಲಿ ನಿಂತಿತು. ಅಲ್ಲಿಗೆ ಭಾರತದ ಹಸಿರು ಹೊದಿಕೆ ಅಭಿವೃದ್ಧಿಗೆ ಸಿಲುಕಿ ಹರಿಯತೊಡಗಿತ್ತು. ಸರಿಪಡಿಸಲು ಹೋರಾಟಗಳೇ ನಡೆದವು.

ಭಾರತದಲ್ಲಿ ಪರಿಸರ ಹೋರಾಟಗಳು ಹುಟ್ಟಲು ಬಹುಮುಖ್ಯ ಕಾರಣಗಳನ್ನು ಕೆಳಗಿನಂತೆ ಗುರ್ತಿಸಬಹುದು:

1. ನೈಸರ್ಗಿಕ ಸಂಪತ್ತಿನ ಮೇಲಿನ ಹತೋಟಿ
2. ಸರ್ಕಾರದ ಅವೈಜ್ಞಾನಿಕ ಅಭಿವೃದ್ಧಿ ನೀತಿ
3. ಸಾಮಾಜಿಕ–ಆರ್ಥಿಕ ಅಸಮಾನತೆ
4. ಪರಿಸರದ ನಾಶ ಮತ್ತು ಅವನತಿ
5. ಮೂಡಿದ ಪರಿಸರ ಪ್ರಜ್ಞೆ ಮತ್ತು ಮಾಧ್ಯಮ




ಬೆಂಗಳೂರಿನಲ್ಲಿ ನಡೆದ ಸಭೆಯೊಂದರಲ್ಲಿ ‘ಚಿಪ್ಕೋ ಆಂದೋಲನ’ದ ಸ್ಫೂರ್ತಿ ಸುಂದರಲಾಲ್ ಬಹುಗುಣ